## ಪರಿವಿಡಿ


| ಕ್ರ. ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1) | ಅಧ್ಯಕ್ಷರ ನುಡಿ | 1-2 |
| 2) | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕರ್ತವ್ಯ ಮತ್ತು ಜವಾಬ್ದಾರಿಗಳು | 3-5 |
| 3) | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿಕಾರಿ ಸಿಬ್ಬಂದಿಗಳ ವಿವರ | 6 |
| 4) | 2020-21ನೇ ಸಾಲಿಗೆ ಕರ್ನಾಟಕರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳು ಹಾಗೂ ಅವುಗಳ ಮೇಲೆ ಕೈಗೊಂಡಕ್ರಮ | 7 |
| 5) | 2020-21ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳನ್ನು ಸಂಬಂಧಪಟ್ಟ ಇಲಾಖೆ/ಜಿಲ್ಲೆಗಳಿಗೆ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳಿಗೆ ಕಳುಹಿಸಿದ ಮನವಿಗಳ ವಿವರ | 8-9 |
| 6) | ರಾಜ್ಯದಲ್ಲಿರುವ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಜಿಲ್ಲಾವಾರು ವಿವರ | 10 |
| 7) | 1993 ರಿಂದ 2021 ರವರೆಗೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟವರ ಮಾಹಿತಿ. | 11 |
| 8) | 1993 ರಿಂದ 2020-21 ರವರೆಗೆ ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಟ್ಟವರ ಮಾಹಿತಿ. | 12 |
| 9) | 2020-21ನೇ ಸಾಲಿನ ಆಯೋಗದ ಶಿಫಾರಸ್ಸುಗಳು | 13 |
| 10) | 2020-21ನೇ ಸಾಲಿನಲ್ಲಿ ಆಯೋಗ ನಿರ್ವಹಿಸಿದ ಗಮನಾರ್ಹ ಕೆಲಸಗಳು | 14-16 |
| 11) | ಸಫಾಯಿ ಕರ್ಮಚಾರಿ ಹಾಗೂ ಗುರುತಿಸಿಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಶ್ರೇಯೋಭಿವೃದ್ಧಿ ಹಾಗೂ ಜ್ವಲಾಂತರ ಸಮಸ್ಯೆಗಳ ಪರಿಹರಿಸಲು ಸರ್ಕಾರದ ಹಂರದಲ್ಲಿ ಕೈಗೊಂಡಿರುವ ಸಭಾ ನಡವಳಿಗಳು. | |
| 12) | ದಿನಾಂಕ:11.12.2020 ರಂದು ಬೆಳಗ್ಗೆ 11.00 ಗಂಟೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಶ್ರೇಯೋಭಿವೃದ್ಧಿಗಾಗಿ ನಡೆಸಿದ ಸಭೆ ನಡವಳಿಗಳು. | 17 |
| 13) | ದಿನಾಂಕ:04.01.2021 ರಂದು ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಕುರಿತು ನಡೆದ ಪರಿಶೀಲನಾ ಸಭೆ ನಡವಳಿ. | 18 |
| 14) | ದಿನಾಂಕ:15.01.2021 ರಂದು ಟೌನ್‌ಹಾಲ್‌ನಲ್ಲಿ ಸಫಾಯಿ ಕರ್ಮಚಾರಿಗಳು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಗುತ್ತಿರುವ ಸಮಸ್ಯೆಗಳ ಕುರಿತು ನಡೆದ ನಡವಳಿ. | 19 |
| 15) | ಶ್ರೀ.ಎಂ.ಶಿವಣ್ಣ(ಕೋಟೆ) ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೊಗ, ಬೆಂಗಳೂರುರವರ ಅಧ್ಯಕ್ಷತೆಯಲ್ಲಿ ದಿನಾಂಕ:24.01.2021 ಬೆಳಗ್ಗೆ 11.00 ಗಂಟೆಗೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಮಸ್ಯೆಗಳ ಕುರಿತು ನಡೆದ ಸಭೆ ನಡವಳಿಗಳು. | 20 |
| 16) | ದಿನಾಂಕ:04.02.2021ರಂದು ಬೆಂಗಳೂರು ನಗರ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ನೌಕರರ ಕುಂದುಕೊರತೆಗಳ ಪರಿಶೀಲನಾ ಸಭೆ ನಡವಳಿಗಳು. | 21 |
| 17) | ದಿನಾಂಕ:10-02-2021ರಂದು ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆ ನಡವಳಿಗಳು. | 22 |

| | | |
|---|---|---|
| 18) | ದಿನಾಂಕ:15.02.2021ರಂದು ಸರಗೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭಾಭವನದಲ್ಲಿ ನಡೆದ ಸಭೆ ನಡವಳಿಗಳು. | **23** |
| 19) | ದಿನಾಂಕ:25.02.2021ರಂದು ಮದ್ದೂರು ಪುರಸಭಾ ಕಛೇರಿಯಲ್ಲಿ ಶ್ರೀ.ಆರ್.ನಾರಾಯಣ, ಪೌರಕಾರ್ಮಿಕರು, ಪುರಸಭೆ ಮದ್ದೂರುರವರು ಆತ್ಮಹತ್ಯೆ ಮಾಡಿಕೊಂಡ ಕುರಿತು ಮಾಹಿತಿ ಸಂಗ್ರಹಿಸಲು ನಡೆದ ಸಭೆ ನಡವಳಿಗಳು. | **24** |
| 20) | ದಿನಾಂಕ:08.03.2021ರಂದು ಶ್ರೀ.ಎಂ.ಶಿವಣ್ಣ(ಕೋಟೆ), ಅಧ್ಯಕ್ಷರು, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಇವರ ಅಧ್ಯಕ್ಷತೆಯಲ್ಲಿ ಬೆಳ್ತಂಗಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕುಂದುಕೊರತೆಗಳ ಬಗ್ಗ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭಾ ಭವನದಲ್ಲಿ ನಡೆದ ಸಭೆ ನಡವಳಿಗಳು. | **25** |
| 21) | ದಿನಾಂಕ:09.03.2021ರಂದು ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಎಂ.ಎಸ್‌ಕಾಯ್ದೆ 2013ರ ಕಾಯ್ದೆ ಮತ್ತು ನಿಯಮಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ನಡವಳಿಗಳು. | **26** |
| 22) | ಜಿಲ್ಲೆಗಳಲ್ಲಿನ ಪ್ರವಾಸದ ಛಾಯಾ ಚಿತ್ರಗಳು. | **27-32** |

# ಅಧ್ಯಕ್ಷರ ನುಡಿ

ಕರ್ನಾಟಕ ರಾಜ್ಯದಲ್ಲಿ ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ಸಮಸ್ಯೆಗಳು/ ಕುಂದುಕೊರತೆಗಳನ್ನು ಗಣನೆಗೆ ತೆಗೆದುಕೊಂಡು, ಇವರಿಗೆ ಸಮಾಜದಲ್ಲಿ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲನೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ರಚನಾತ್ಮಕ ಕಾರ್ಯಕ್ರಮಗಳಗಾಗಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2013ರನ್ವಯ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವನ್ನು ಸ್ಥಾಪಿಸಲಾಗಿದೆ.

ಪ್ರತಿ ಹಣಕಾಸು ವರ್ಷಕ್ಕಾಗಿ ಆಯೋಗವು ತನ್ನ ವಾರ್ಷಿಕ ಕಾರ್ಯಚಟುವಟಿಕೆಯ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವ ವಾರ್ಷಿಕ ವರದಿಯನ್ನು ಕಾಯ್ದೆಯ ಸೆಕ್ಷನ್-13ರ ಪ್ರಕಾರ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2012ರ ಅನ್ವಯ ತಯಾರಿಸಬೇಕಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ 2020-21ನೇ ಸಾಲಿಗೆ ಅನ್ವಯಿಸುವಂತೆ ವಾರ್ಷಿಕ ವರದಿಯನ್ನು ತಯಾರಿಸಲಾಗಿದೆ.

ವಿವಿಧ ಜಿಲ್ಲೆಗಳಿಂದ ಸಫಾಯಿ ಕರ್ಮಚಾರಿ ಮುಖಂಡರಿಂದ ಸಫಾಯಿ ಕರ್ಮಚಾರಿಗಳ ಮತ್ತು ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳ ಕುರಿತು ಆಯೋಗಕ್ಕೆ ಸ್ವೀಕೃತಗೊಳ್ಳುವ ಅಹವಾಲು/ಮನವಿಗಳ ಮೇಲೆ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ಪತ್ರಗಳನ್ನು ಕಳುಹಿಸಿ, ಮೇಲ್ವಿಚಾರಣೆ ಮಾಡಲಾಗುತ್ತಿದೆ.

ಸಫಾಯಿ ಕರ್ಮಚಾರಿಗಳಿಗೆ ಸ್ವಚ್ಚತೆ, ವೈದ್ಯಕೀಯ ಸೇವೆ, ಅವರ ಮಕ್ಕಳ ವಿದ್ಯಾಭ್ಯಾಸ, ಯು.ಜಿ.ಡಿ. ಸ್ವಚ್ಚಗೊಳಸುವಾಗ ಮಾನವ ಶಕ್ತಿ ಬಳಕೆ ಮಾಡದೇ ಯಂತ್ರಗಳನ್ನು ಉಪಯೋಗಿಸುವುದು ಹಾಗೂ ದಂಡ ವಿಧಿಸುವುದು, ಮೂಲಭೂತ ಸೌಕರ್ಯ ಮುಂತಾದ ವಿಷಯಗಳ ಕುರಿತು ಆಯೋಗದಿಂದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರೇತರ ಸಂಸ್ಥೆಗಳ ಹಾಗೂ ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಜಿಲ್ಲಾಧಿಕಾರಿಗಳ ಮೂಲಕ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.

**'ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್'** ತಡೆಗಟ್ಟುವುದಲ್ಲದೆ, ಕರ್ನಾಟಕ ರಾಜ್ಯವನ್ನು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಮುಕ್ತ ರಾಜ್ಯವನ್ನಾಗಿಸುವ ನಿಟ್ಟಿನಲ್ಲಿ ಆಯೋಗವು ಕಾರ್ಯವನ್ನು ನಿರ್ವಹಿಸುತ್ತಿದೆ. ಮ್ಯಾನ್‌ಹೋಲ್, ಸೆಪ್ಟಿಕ್ ಟ್ಯಾಂಕ್, ಒಳಚರಂಡಿ, ತೆರೆದ ಚರಂಡಿಗಳನ್ನು ಸ್ವಚ್ಛಗೊಳಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಪರಿಹಾರಧನವನ್ನು ಸಂಬಂಧಪಟ್ಟ ಇಲಾಖೆಗಳಿಂದ ಕೊಡಿಸಲಾಗುತ್ತಿದೆ ಹಾಗೂ ಸದರಿಯವರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಲು ಕ್ರಮವಹಿಸಲಾಗುತ್ತಿದೆ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ ಮತ್ತು ನಿಯಮ 2013ರ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ/ಪೌರಕಾರ್ಮಿಕರಿಗೆ/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುತ್ತಿರುವ ಸೌಲಭ್ಯಗಳ ಮಾಹಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವ 198 ವಾರ್ಡ್ ಕಛೇರಿಯ ಆವರಣದಲ್ಲಿ ಹಾಗೂ ಬಿಬಿಎಂಪಿ ವ್ಯಾಪ್ತಿಯ 52 ಆಸ್ಪತ್ರೆಗಳ ಆವರಣಗಳಲ್ಲಿ ಒಟ್ಟು 250 ಸ್ಥಳಗಳಲ್ಲಿ ಅರಿವು ಮೂಡಿಸುವ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವ ಸಂಬಂಧ ಎಂ.ಎಸ್.ಕಾಯ್ದೆ ಸೆಕ್ಷನ್‌ಗಳ ಸಂದೇಶ ಸಾರುವ ಸೈನ್‌ಬೋರ್ಡ್‌ಗಳನ್ನು ಎಂ.ಸಿ&ಎ ಸಂಸ್ಥೆ ಮುಖಾಂತರ ಅಳವಡಿಸಿದೆ.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮವನ್ನು ಉಲ್ಲಂಘಿಸಿದರೆ ಶಿಕ್ಷೆ ಹಾಗೂ ಯಂತ್ರೋಪಕರಣಗಳ ಮೂಲಕ ಸ್ವಚ್ಛಗೊಳಿಸುವ ಭಾವಚಿತ್ರಗಳಿರುವ ಭಿತ್ತಿಚಿತ್ರಗಳನ್ನು ಬೆಂಗಳೂರು ನಗರ ವ್ಯಾಪ್ತಿಯ 150 ಬಿ.ಎಂ.ಟಿ.ಸಿ ಸಾಮಾನ್ಯ ಬಸ್‌ಗಳ ಹಿಂಬದಿಯಲ್ಲಿ ಮೂರು ತಿಂಗಳ ಅವಧಿಗೆ ಅಳವಡಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ರವರ ಮೂಲಕ ಅಳವಡಿಸಲು ಕ್ರಮವಹಿಸಿದೆ.

ಸರ್ಕಾರವು ವಿಶೇಷ ನೇಮಕಾತಿಗೆ ನಿಯಮಗಳನ್ನು ರೂಪಿಸಿ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಆಯಾ ಸ್ಥಳೀಯ ಸಂಸ್ಥೆಗಳು ಹೊರಗುತ್ತಿಗೆ ಪೌರಕಾರ್ಮಿಕರಿಗೆ ನೇರವಾಗಿ ಸಂಭಾವನೆ ಪಾವತಿಸಲು ನಗರಾಭಿವೃದ್ಧಿ ಇಲಾಖೆಯಿಂದ ವಿಶೇಷ ನೇಮಕಾತಿ ಹಾಗೂ ನೇರ ಸಂಭಾವನೆ ಪಾವತಿ ಮಾಡುವಲ್ಲಿ ಆಯೋಗ ಗಮನಾರ್ಹವಾದಂತಹ ಕೆಲಸ ನಿರ್ವಹಿಸಿದೆ.

ಎಂ.ಎಸ್.ಕಾಯ್ದೆ 2013ರನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು, ಸಫಾಯಿ ಕರ್ಮಚಾರಿಗಳ/ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುಂದುಕೊರತೆಗಳಿಗೆ ಸೂಕ್ತ ಪರಿಹಾರ ದೊರಕಿಸಿಕೊಡಲು, ಅವರ ಸಾಮಾಜಿಕ ಭದ್ರತೆ, ಆರ್ಥಿಕ ಸಧೃಡತೆಗಾಗಿ ಮತ್ತು ಸರ್ವಾಂಗೀಣ ಅಭಿವೃದ್ಧಿಗಾಗಿ ಆಯೋಗವು ನಿಷ್ಠಾಪೂರ್ವಕವಾಗಿ ಶ್ರಮಿಸುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

**ಸಹಿ/-**
**ಎಂ.ಶಿವಣ್ಣ (ಕೋಟೆ)**
**ಅಧ್ಯಕ್ಷರು,**
**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ**
**ಆಯೋಗ, ಬೆಂಗಳೂರು**

## ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ

## ಕರ್ತವ್ಯ ಮತ್ತು ಜವಾಬ್ದಾರಿಗಳು

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 50 ಶಾಸನ 2012 ದಿನಾಂಕ:04-01-2013ರನ್ವಯ ರಚನೆಯಾಗಿರುತ್ತದೆ. ಅದರಂತೆ ಆಯೋಗವು ದಿನಾಂಕ:01-02-2013 ರಿಂದ ಅಧಿಕೃತವಾಗಿ ನಂ.1/14, ದಕ್ಷಿಣ ವಿಂಗ್ ನೆಲಮಹಡಿ, ಸಿಲ್ವರ್ ಜ್ಯೂಬ್ಲಿ ಬ್ಲಾಕ್, ಪಾರ್ಟ್ ಆಫ್ ಯೂನಿಟಿ ಬಿಲ್ಡಿಂಗ್ ಕಾಂಪ್ಲೆಕ್ಸ್, ಮಿಷನ್ ರೋಡ್, ಬೆಂಗಳೂರು-27 ಇಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ಸಫಾಯಿ ಕರ್ಮಚಾರಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಸಾಮಾಜಿಕ ಭದ್ರತೆಗಾಗಿ ಆಯೋಗವು **ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ,** 2013ರ ಕರ್ನಾಟಕ ಅಧಿನಿಯಮ ಸಂಖ್ಯೆ 2ರನ್ವಯ ಪ್ರಕಾರ್ಯಗಳನ್ನು ನೆರವೇರಿಸುತ್ತಿದೆ.

**ಕೇಂದ್ರ ಸರ್ಕಾರವು ಹೊರಡಿಸಿರುವ** ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮವನ್ನು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಅನುಷ್ಟಾನದ ಮೇಲ್ವಿಚಾರಣೆ ಮಾಡುವ ಸಂಬಂಧ ಯುಕ್ತ ಪ್ರಾಧಿಕಾರವನ್ನಾಗಿ ನೇಮಿಸಿದೆ.

**ಸಫಾಯಿ ಕರ್ಮಚಾರಿಗಳೆಂದರೆ,** ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ರಸ್ತೆ ಗುಡಿಸಲು ಅಥವಾ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ವ್ಯಕ್ತಿಗಳು, ಸಫಾಯಿ ಕರ್ಮಚಾರಿಗಳೆಂದರೆ ಮೂಲತ: ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.

**ಮ್ಯಾನ್ಯುಯಲ್ ಸ್ಕ್ಯಾವೆಂಜರ್** ಎಂದರೆ, ದೈಹಿಕವಾಗಿ ಮನುಷ್ಯನ ಮಲ-ಮೂತ್ರವನ್ನು ಸಂಪೂರ್ಣ ಕೊಳೆಯುವ ಮೊದಲೇ ಸ್ವಚ್ಛಗೊಳಿಸಲು ತೆರೆದ ಚರಂಡಿಗಳು, ಗುಂಡಿಗಳು, ರೈಲ್ವೆ ಹಳಿಗಳಿಂದ ವಿಲೇವಾರಿ ಮಾಡುವ ಅನೈರ್ಮಲ್ಯ ಕಾರ್ಯದಲ್ಲಿ ನಿರತನಾಗಿರುವ ಅಥವಾ ನಿಯೋಜನೆಗೊಂಡಿರುವ ಒಬ್ಬ ವ್ಯಕ್ತಿ.

**ಆಯೋಗದ ಕರ್ತವ್ಯ & ಜವಾಬ್ದಾರಿಗಳು:**

ಕೇಂದ್ರ ಸರ್ಕಾರದ ಕಾಯ್ದೆ **"THE PROHIBITION OF EMPLOYMENT AS A MANUAL SCAVENGERS AND THEIR REHABILITATION ACT AND RULES 2013"**ರಲ್ಲಿ ತಿಳಿಸಿರುವ ಕಂಡಿಕೆಗಳ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಯೋಗವು ಶ್ರಮಿಸುತ್ತಿದೆ. ರಾಜ್ಯ ಆಯೋಗವು "**ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ**" ಕಾಲಕಾಲಕ್ಕೆ ನೀಡುವ ಸಲಹೆ ಸೂಚನೆಗಳನ್ನು ಪಾಲಿಸುತ್ತಿದೆ.

ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದ್ದು, ಸಿವಿಲ್ ನ್ಯಾಯಾಲಯದ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಆಯೋಗವು quazi judicial ಅಧಿಕಾರವನ್ನು ಹೊಂದಿದ್ದು 1–ಅಧ್ಯಕ್ಷರು, 2–ಸದಸ್ಯರು (1 ಮಹಿಳೆ +1 ಪುರುಷ) ಹೊಂದಿದ್ದು ಇವರು ಸರ್ಕಾರದಿಂದ ನಾಮ ನಿರ್ದೇಶಿತರಾಗಿರುತ್ತಾರೆ.

**ಎ)** ಕಾಲಮಿತಿ ಕ್ರಿಯಾ ಯೋಜನೆ ಅಡಿಯಲ್ಲಿ ಸಫಾಯಿ ಕರ್ಮಚಾರಿಗಳಿಗೆ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲ ಮಾಡುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು:

**ಬಿ)** ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ರಮಗಳು ಮತ್ತು ಅನುಷ್ಠಾನಗಳ ಅಧ್ಯಯನ ಮಾಡುವುದು ಮತ್ತು ಮೌಲ್ಯಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನವನ್ನು ಅಧ್ಯಯನ ಮಾಡುವುದು ಮತ್ತು ಮೌಲ್ಯ ಮಾಪನ ಮಾಡುವುದು ಹಾಗೂ ಅಂತಹ ಕಾರ್ಯಕ್ರಮಗಳ ಮತ್ತು ಯೋಜನೆಗಳ ಸಮನ್ವಯ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.

**ಸಿ)** ನಿರ್ದಿಷ್ಟ ಕುಂದು ಕೊರತೆಗಳನ್ನು ವಿಚಾರಿಸುವುದು ಎಂದರೆ:–

i. ಸಫಾಯಿ ಕರ್ಮಚಾರಿಗಳ ಯಾವುದೇ ವರ್ಗಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಅಥವಾ ಯೋಜನೆಗಳು.

ii. ಸಫಾಯಿ ಕರ್ಮಚಾರಿಗಳ ತೊಂದರೆಗಳನ್ನು ಶಮನಗೊಳಿಸುವ ಉದ್ದೇಶವನ್ನು ಹೊಂದಿರುವ ತೀರ್ಮಾನಗಳು, ಮಾರ್ಗದರ್ಶನಗಳು ಅಥವಾ ಸೂಚನೆಗಳು;

iii. ಸಫಾಯಿ ಕರ್ಮಚಾರಿಗಳ ಸಾಮಾಜಿಕ ಮತ್ತು ಆರ್ಥಿಕ ಏಳಿಗೆಗಾಗಿನ ಕ್ರಮಗಳು.

iv. ಇವುಗಳನ್ನು ಅನುಷ್ಠಾನಕ್ಕೆ ತರದಿರುವ ವಿಷಯಗಳಿಗೆ ಸಂಬಂಧಿಸಿದ ಅಂಶಗಳನ್ನು ಗಮನಿಸುವುದು.

**ಡಿ)** ಸಫಾಯಿ ಕರ್ಮಚಾರಿಗಳು ಎದುರಿಸುತ್ತಿರುವ ತೊಂದರೆಗಳು ಮತ್ತು ಕುಂದು ಕೊರತೆಗಳನ್ನು ಪರಿಗಣಿಸಿ, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು;

**ಇ)** ರಾಜ್ಯ ಸರ್ಕಾರವು ತನಗೆ ಕಳುಹಿಸಬಹುದಾದ ಯಾವುದೇ ಇತರೆ ವಿಷಯ.

ಆಯೋಗವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಅದರ ಏಜೆನ್ಸಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

**ಆಯೋಗದ ಅಧಿಕಾರಗಳು**: ಆಯೋಗವು, ೮ನೇ ಪ್ರಕರಣದ ಅಡಿಯಲ್ಲಿ ಯಾವುದೇ ವಿಷಯವನ್ನು ತನಿಖೆ ಮಾಡುವಾಗ, ವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಮತ್ತು ವಿಶೇಷವಾಗಿ ಸಂಬಂಧಪಟ್ಟಂತೆ ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ,

i. ರಾಜ್ಯದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯನ್ನು ಸಮನ್ಸ್ ಮೂಲಕ ಕರೆಸುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು;

ii. ಯಾವುದೇ ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಶೋಧಿಸುವುದನ್ನು ಮತ್ತು ಹಾಜರುಪಡಿಸುವುದನ್ನು ಅಗತ್ಯಪಡಿಸುವುದು;

iii. ಅಫಿಡವಿಟ್‌ಗಳ ಮೂಲಕ ಯಾವುದೇ ಸಾಕ್ಷ್ಯವನ್ನು ಸ್ವೀಕರಿಸುವುದು;

iv. ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ನೀಡುವಂತೆ ಅಗತ್ಯಪಡಿಸುವುದು;

v. ನಿಯಮಿಸಬಹುದಾದಂತ ಇತರ ಯಾವುದೇ ವಿಷಯ.

# ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿಕಾರಿ/ಸಿಬ್ಬಂದಿಗಳ ವಿವರ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳು | ಭರ್ತಿ ಹುದ್ದೆಗಳು |
|---|---|---|---|
| 1 | **ಶ್ರೀಮತಿ.ಆರ್.ರಮಾ** ಕಾರ್ಯದರ್ಶಿ | 01 | 01 |
| 2 | **ಶ್ರೀಮತಿ.ಸುವರ್ಣ ಬಾಗಿ(ಪ್ರ)** ಸಂಶೋಧನಾಧಿಕಾರಿ | 01 | - |
| 3 | **ಶ್ರೀಮತಿ.ಸುವರ್ಣ ಬಾಗಿ** ಸಹಾಯಕ ನಿರ್ದೇಶಕರು | 01 | 01 |
| 4 | **ಶ್ರೀಮತಿ.ಬಿ.ಎಸ್.ವಿಮಲ** ಆಪ್ತ ಕಾರ್ಯದರ್ಶಿ | 01 | 01 |
| 5 | **ಶ್ರೀಮತಿ.ಸುರೇಖಾ ದೊರೆಗೊಳ್** ಕಛೇರಿ ಅಧೀಕ್ಷಕರು | 01 | 01 |
| 6 | ಪ್ರಥಮ ದರ್ಜೆ ಸಹಾಯಕರು | 02 | ಖಾಲಿ ಹುದ್ದೆ (ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 7 | ಆಪ್ತ ಸಹಾಯಕರು | 01 | ಖಾಲಿ ಹುದ್ದೆ (ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 8 | ದ್ವಿತೀಯ ದರ್ಜೆ ಸಹಾಯಕರು/ ಡಾಟಾ ಎಂಟ್ರಿ ಆಪರೇಟರ್ | 04 | ಖಾಲಿ ಹುದ್ದೆ (ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 9 | ವಾಹನ ಚಾಲಕರು | 03 | ಖಾಲಿ ಹುದ್ದೆ (ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| 10 | ಗ್ರೂಪ್ 'ಡಿ' | 03 | ಖಾಲಿ ಹುದ್ದೆ (ಹೊರ ಸಂಪನ್ಮೂಲದಿಂದ ಪಡೆಯಲಾಗಿದೆ) |
| **ಒಟ್ಟು** | | **18** | **04** |

## 2020-21ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದಲ್ಲಿ ನಿಗದಿಪಡಿಸಿರುವ ಅನುದಾನ

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮ | ಒದಗಿಸಿದ ಅನುದಾನ | ಖರ್ಚು |
|---|---|---|---|
| 1 | ಅಧಿಕಾರಿ, ಸಿಬ್ಬಂದಿಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು | 76.08 | 48.30 |
| 2 | ಅಧ್ಯಕ್ಷರ ಹಾಗೂ ಸದಸ್ಯರುಗಳ ವೇತನ ಹಾಗೂ ಇನ್ನಿತರೆ ಭತ್ಯೆಗಳು | 7.00 | 7.00 |
| 3 | ಆಯೋಗದ ನಿರ್ವಹಣೆ ಮತ್ತು ಇತರೆ ವೆಚ್ಚಗಳು (ಕಟ್ಟಡ ಬಾಡಿಗೆ, ಹೊರಸಂಪನ್ಮೂಲ ನೌಕರರ ವೇತನ, ಪ್ರವಾಸ, ದೂರವಾಣಿ, ಸಾರಿಗೆ, ಇತರೆ ವೆಚ್ಚ) | 88.00 | 88.00 |
| 4 | ಸಫಾಯಿ ಕರ್ಮಚಾರಿಗಳ ಬಗ್ಗೆ ಹಾಗೂ ಎಂ.ಎಸ್ ಕಾಯ್ದೆ 2013ರ ಅನುಷ್ಠಾನ ಸಂಬಂಧ ಅರಿವು ಮೂಡಿಸುವ ನಿಟ್ಟಿನಲ್ಲಿ ಯೋಜನೆ ಮತ್ತು ಕಾರ್ಯಕ್ರಮವನ್ನು ಆಯೋಜಿಸುವುದು. | 25.00 | 25.00 |
| **ಒಟ್ಟು** | | **196.08** | **168.03** |

- **ರೂ.28.05 ಲಕ್ಷಗಳು ಆಯೋಗದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಯು ಖಾಲಿ ಇರುವುದರಿಂದ ವೇತನದ ಉಳಿಕೆ ಮೊತ್ತ**.

# 2020-21ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸ್ವೀಕೃತವಾಗಿರುವ ಮನವಿಗಳನ್ನು ಸಂಬಂಧಪಟ್ಟ ಇಲಾಖೆ/ಜಿಲ್ಲೆಗಳಿಗೆ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳಿಗೆ ಕಳುಹಿಸಿದ ಮನವಿಗಳ ವಿವರ

| ಕ್ರ.ಸಂ. | ಜಿಲ್ಲೆಗಳು | ಸ್ವೀಕೃತಿ | ಕ್ರಮ ಕೈಗೊಂಡಿರುವ ಮನವಿಗಳ ವಿವರ |
|---|---|---|---|
| 1. | ಬೆಂಗಳೂರು ನಗರ | 81 | 81 |
| 2. | ಬೆಂಗಳೂರು ಗ್ರಾಮಾಂತರ | 3 | 3 |
| 3. | ಬಾಗಲಕೋಟೆ | 1 | 1 |
| 4. | ಬೆಳಗಾವಿ | 9 | 9 |
| 5. | ಬಳ್ಳಾರಿ | 9 | 9 |
| 6. | ಬೀದರ್ | - | - |
| 7. | ವಿಜಯಪುರ | - | - |
| 8. | ಚಾಮರಾಜನಗರ | 3 | 3 |
| 9. | ಚಿಕ್ಕಬಳ್ಳಾಪುರ | - | - |
| 10. | ಚಿಕ್ಕಮಗಳೂರು | - | - |
| 11. | ಚಿತ್ರದುರ್ಗ | 5 | 5 |
| 12. | ದಕ್ಷಿಣ ಕನ್ನಡ | 5 | 5 |
| 13. | ದಾವಣಗೆರೆ | 2 | 2 |
| 14. | ಧಾರವಾಡ | 11 | 11 |
| 15. | ಗದಗ | 2 | 2 |
| 16. | ಕಲಬುರಗಿ | - | - |
| 17. | ಹಾಸನ | 10 | 10 |
| 18. | ಹಾವೇರಿ | 1 | 1 |
| 19. | ಕೊಡಗು | - | - |
| 20. | ಕೋಲಾರ | 10 | 10 |
| 21. | ಕೊಪ್ಪಳ | 4 | 4 |
| 22. | ಮಂಡ್ಯ | 5 | 5 |
| 23. | ಮೈಸೂರು | 14 | 14 |

| | | | |
|---|---|---|---|
| 24. | ರಾಯಚೂರು | 1 | 1 |
| 25. | ರಾಮನಗರ | 1 | 1 |
| 26. | ಶಿವಮೊಗ್ಗ | 2 | 2 |
| 27. | ತುಮಕೂರು | 5 | 5 |
| 28. | ಉಡುಪಿ | - | - |
| 29. | ಉತ್ತರ ಕನ್ನಡ | 4 | 4 |
| 30. | ಯಾದಗಿರಿ | - | - |
| **ಒಟ್ಟು** | | **188** | **188** |

| ರಾಜ್ಯದಲ್ಲಿ ಜಿಲ್ಲಾವಾರು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ವಿವರ | | | | | | |
|---|---|---|---|---|---|---|
| ಕ್ರ.ಸಂ. | ಜಿಲ್ಲೆಯ ಹೆಸರು | 2013ನೇ ಸಾಲಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷೆ | 2016ನೇ ಸಾಲಿಗೆ ಗ್ರಾಮೀಣ ಭಾಗಗಳಲ್ಲಿ ಸಮೀಕ್ಷೆ | 2018ನೇ ಸಾಲಿಗೆ ರಾಷ್ಟ್ರೀಯ ಸಮೀಕ್ಷೆ | | ಒಟ್ಟು |
| | | | | ನಗರ | ಗ್ರಾಮೀಣ | |
| 1 | ಬೆಂಗಳೂರು ನಗರ | - | 90 | 8 | 37 | **135** |
| 2 | ಬೆಂಗಳೂರು ಗ್ರಾಮೀಣ | 7 | 24 | 0 | 55 | **86** |
| 3 | ಬಳ್ಳಾರಿ | - | 10 | - | - | **10** |
| 4 | ಬೀದರ್ | - | 2 | - | - | **2** |
| 5 | ಚಿಕ್ಕಬಳ್ಳಾಪುರ | - | 12 | - | - | **12** |
| 6 | ಹಾವೇರಿ | - | 7 | 22 | 49 | **78** |
| 7 | ಕೋಲಾರ | 91 | 148 | 721 | 264 | **1224** |
| 8 | ಮಂಡ್ಯ | - | 42 | - | - | **42** |
| 9 | ರಾಯಚೂರು | - | 43 | 6 | 43 | **92** |
| 10 | ಶಿವಮೊಗ್ಗ | - | 22 | - | - | **22** |
| 11 | ಉಡುಪಿ | - | 3 | - | - | **3** |
| 12 | ಯಾದಗಿರಿ | - | 14 | - | - | **14** |
| 13 | ಮೈಸೂರು | - | - | - | 1016 | **1016** |
| 14 | ಧಾರವಾಡ | - | - | - | 60 | **60** |
| 15 | ಕಲಬುರಗಿ | - | - | 196 | 17 | **213** |
| 16 | ಕೊಪ್ಪಳ | 2 | - | - | - | **2** |
| 17 | ಬೆಳಗಾವಿ | - | - | - | 42 | **42** |
| 18 | ದಾವಣಗೆರೆ | - | - | 380 | 22 | **402** |
| 19 | ವಿಜಯಪುರ | - | - | 0 | 0 | **0** |
| 20 | ಬಾಗಲಕೋಟೆ | - | - | 0 | 0 | **0** |
| 21 | ಬಿಬಿಎಂಪಿ | 201 | - | 1424 | - | **1625** |
| **ಒಟ್ಟು** | | **301** | **417** | **2757** | **1605** | **5080** |

## 1993 ರಿಂದ 2021 ರವರೆಗೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟವರ ಮಾಹಿತಿ.

| ಕ್ರ.ಸಂ. | ವರ್ಷ | ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟವರ ಸಂಖ್ಯೆ |
|---|---|---|
| 1 | 1993-94 | - |
| 2 | 1994-95 | - |
| 3 | 1995-96 | 1 |
| 4 | 1998-99 | 3 |
| 5 | 2001-02 | 1 |
| 6 | 2007-08 | 2 |
| 7 | 2008-09 | 7 |
| 8 | 2009-10 | 3 |
| 9 | 2010-11 | 2 |
| 10 | 2011-12 | 7 |
| 11 | 2012-13 | 7 |
| 12 | 2013-14 | 7 |
| 13 | 2015-16 | 13 |
| 14 | 2016-17 | 9 |
| 15 | 2017-18 | 6 |
| 16 | 2018-19 | 4 |
| 17 | 2019-20 | 8 |
| 18 | 2020-21 | 5 |
| **ಒಟ್ಟು** | | **85** |

## 1993 ರಿಂದ 2021ರವರೆಗೆ ರಾಜ್ಯದಲ್ಲಿ ಮ್ಯಾನ್ಹೋಲ್/ಸೆಪ್ಟಿಕ್‌ಟ್ಯಾಂಕ್/ಒಳಚರಂಡಿ ಸ್ವಚ್ಛಗೊಳಿಸುವಗ ಮೃತಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್/ಪೌರಕಾರ್ಮಿಕರ ಜಿಲ್ಲಾವಾರು ಮಾಹಿತಿ

| ಕ್ರ.ಸಂ | ಜಿಲ್ಲೆ ಹೆಸರು | ಮೃತಪಟ್ಟವರ ಒಟ್ಟು ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 40 |
| 2 | ಬೆಂಗಳೂರು ಗ್ರಾಮಾಂತರ | 4 |
| 3 | ಮೈಸೂರು | 6 |
| 4 | ಮಂಡ್ಯ | 1 |
| 5 | ಹಾಸನ | 5 |
| 6 | ಕೋಲಾರ | 5 |
| 7 | ತುಮಕೂರು | 4 |
| 8 | ಚಾಮರಾಜನಗರ | 1 |
| 9 | ಶಿವಮೊಗ್ಗ | 4 |
| 10 | ರಾಯಚೂರು | 1 |
| 11 | ಉಡುಪಿ | 1 |
| 12 | ಧಾರವಾಡ | 9 |
| 13 | ವಿಜಯಪುರ | 3 |
| 14 | ಉತ್ತರ ಕನ್ನಡ | 1 |
| | ಒಟ್ಟು | 85 |

## 2020-21ನೇ ಸಾಲಿನ ಆಯೋಗದ ಶಿಫಾರಸ್ಸುಗಳು.

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳಲ್ಲಿನ ಮಸ್ಟ್ರಿಂಗ್ ಪಾಯಿಂಟ್‌ಗಳಲ್ಲಿ ಪೌರಕಾರ್ಮಿಕರಿಗೆ/ ಸಫಾಯಿ ಕರ್ಮಚಾರಿಗಳಿಗೆ/ ಸ್ವಚ್ಛತಾ ಕೆಲಸಗಾರರಿಗೆ ವಿಶ್ರಾಂತಿ ಗೃಹಗಳನ್ನು ನಿರ್ಮಿಸಿ ಭೋಜನ ಕೊಠಡಿ ಮತ್ತು ಶೌಚಾಲಯಗಳ ವ್ಯವಸ್ಥೆಯನ್ನು ಒದಗಿಸುವುದು.

2. ಪೌರಕಾರ್ಮಿಕರಿಗೆ/ ಸಫಾಯಿ ಕರ್ಮಚಾರಿಗಳಿಗೆ/ ಸ್ವಚ್ಛತಾ ಕೆಲಸಗಾರರು ಬೆಳಗ್ಗೆ 6.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಲು ಮನೆಯನ್ನು ಬೆಳಗ್ಗೆ 5.00 ಗಂಟೆಗೆ ಬಿಡುತ್ತಿದ್ದು, ಅವರುಗಳ ಚಿಕ್ಕ ಮಕ್ಕಳ ಲಾಲನೆ-ಪಾಲನೆಗಾಗಿ ಪ್ರತಿ ಕಾಲೋನಿಗಳಲ್ಲಿ ಮಕ್ಕಳ ಆರೈಕೆ ಕೇಂದ್ರವನ್ನು ಬೆಳಗ್ಗೆ 5.30 ರಿಂದ ಮಧ್ಯಾಹ್ನ 2.00 ಗಂಟೆವರೆಗೆ ತೆರೆಯುವುದು.

3. ಪೌರಕಾರ್ಮಿಕರು ಅಪೌಷ್ಠಿಕತೆಯಿಂದ ಬಳಲುತ್ತಿರುವುದರಿಂದ ಬೆಳಗಿನ ಉಪಹಾರ ಭತ್ಯೆ ರೂ.20/- ರಿಂದ ರೂ.50/- ಕ್ಕೆ ಹೆಚ್ಚಿಸಿ ಇದರೊಂದಿಗೆ ಕಡ್ಡಾಯವಾಗಿ ಎರಡು ಮೊಟ್ಟೆಗಳು ಮತ್ತು 1 ಗ್ಲಾಸ್ ಹಾಲನ್ನು ವಿತರಿಸುವುದು.

4. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ ಮಹಾನಗರ ಪಾಲಿಕೆ/ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೋಡರ್ಸ್, ಕ್ಲೀನರ್ಸ್ ಮತ್ತು ವಾಹನ ಚಾಲಕರಿಗೆ ಗುತ್ತಿಗೆಯಡಿ ವೇತನ ಪಾವತಿಸುತ್ತಿದ್ದು, ವೇತನವನ್ನು ನೇರ ಪಾವತಿಯಡಿ ಪಾವತಿಸುವುದು.

5. ಮಹಿಳಾ ಪೌರಕಾರ್ಮಿಕರಿಗೆ/ ಸಫಾಯಿ ಕರ್ಮಚಾರಿಗಳಿಗೆ/ ಸ್ವಚ್ಛತಾ ಕೆಲಸಗಾರಿಗೆ 6 ತಿಂಗಳ ವೇತನ ಸಹಿತ ಹೆರಿಗೆ ರಜೆಯನ್ನು ನೀಡುವುದು.

6. ರಾಜ್ಯದಲ್ಲಿ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಅಥವಾ ಅವರ ಕುಟುಂಬದ ಅವಲಂಬಿತರಿಗೆ ವಿಶೇಷ ನೇಮಕಾತಿ ನಿಯಮ ಜಾರಿಗೊಳಿಸುವುದು.

7. ಪೌರಕಾರ್ಮಿಕರಿಗೆ/ಸಫಾಯಿ ಕರ್ಮಚಾರಿಗಳಿಗೆ/ಸ್ವಚ್ಛತಾ ಕೆಲಸಗಾರ ಕುಟುಂಬದವರ ಸಮಸ್ಯೆಗಳ ಕುರಿತು ಸಮಾಲೋಚನಾ ಸಭೆ, ಕಾರ್ಯಕ್ರಮ ಮತ್ತು ಕಾರ್ಯಗಾರಗಳನ್ನು ನಡೆಸಲು ಐ.ಪಿ.ಡಿ ಸಾಲಪ್ಪ ಭವನಗಳನ್ನು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಿಸುವುದು.

8. ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ ಕಲ್ಪಿಸುವುದು.

## 2020–21 ನೇ ಸಾಲಿನಲ್ಲಿ ಆಯೋಗ ನಿರ್ವಹಿಸಿದ ಗಮನಾರ್ಹ ಕೆಲಸಗಳು

1. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ/ ಪೌರಕಾರ್ಮಿಕರಿಗೆ/ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುತ್ತಿರುವ ಸೌಲಭ್ಯಗಳ ಮಾಹಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವ 198 ವಾರ್ಡ್ ಕಛೇರಿ ಹಾಗೂ ಬಿಬಿಎಂಪಿ ವ್ಯಾಪ್ತಿಯ 52 ಆಸ್ಪತ್ರೆಗಳ ಆವರಣಗಳಲ್ಲಿ ಒಟ್ಟು 250 ಸ್ಥಳಗಳಲ್ಲಿ ಅರಿವು ಮೂಡಿಸುವ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಜಾಗೃತಿ ಮೂಡಿಸುವ ಸಂಬಂಧ ಎಂ.ಎಸ್ ಕಾಯ್ದೆ ಸೆಕ್ಷನ್‌ಗಳ ಸಂದೇಶ ಸಾರುವ ಸೈನ್‌ಬೋರ್ಡ್‌ಗಳನ್ನು ಎಂ.ಸಿ&ಎ ಸಂಸ್ಥೆ ಮುಖಾಂತರ ಕ್ರಮವಹಿಸಲಾಗುತ್ತಿದೆ.

2. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಕಾಯ್ದೆಯನ್ನು ಉಲ್ಲಂಘಿಸಿದರೆ ಶಿಕ್ಷೆ ಹಾಗೂ ಯಂತ್ರೋಪಕರಣಗಳ ಮೂಲಕ ಸ್ವಚ್ಛಗೊಳಿಸುವ ಭಾವಚಿತ್ರಗಳಿರುವ ಭಿತ್ತಿಚಿತ್ರಗಳನ್ನು ಬೆಂಗಳೂರು ನಗರ ವ್ಯಾಪ್ತಿಯ 150 ಬಿ.ಎಂ.ಟಿ.ಸಿ ಸಾಮಾನ್ಯ ಬಸ್‌ಗಳ ಹಿಂಬದಿಯಲ್ಲಿ ಮೂರು ತಿಂಗಳ ಅವಧಿಗೆ ಅಳವಡಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ರವರ ಮೂಲಕ ಅಳವಡಿಸಲು ಕ್ರಮವಹಿಸಿದೆ.

3. ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್/ತೆರೆದ ಚರಂಡಿಗಳಲ್ಲಿ ಮೃತಪಟ್ಟ **85** ಕುಟುಂಬಗಳ ಪುನರ್ವಸತಿಗಾಗಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸ್ಥಿತಿ–ಗತಿಗಳ ಕುರಿತು ವಿವರವಾದ ಅಧ್ಯಯನವನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ (I.S.E.C) ರವರ ಮೂಲಕ ನಡೆಸಲಾಗುತ್ತಿದೆ.

4. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಐ.ಐ.ಎಸ್‌ಸಿ, ರವರ ಸಹಯೋಗದಲ್ಲಿ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಾವುಗಳನ್ನು ತಡೆಯಲು ಅತ್ಯಾಧುನಿಕ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳ ಬಳಕೆಯ ಬಗ್ಗೆ ಸಭೆಯನ್ನು ಏರ್ಪಡಿಸಲಾಯಿತು.

5. Elimination of manual cleaning sewer and septic tanks ಸಂಬಂಧ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಯನ್ನು ರಚಿಸಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಷ್ಟಾನ ಮತ್ತು ಮೇಲ್ವಿಚಾರಣೆ ನಡೆಸಲು ಕ್ರಮವಹಿಸಲಾಗುತ್ತಿದೆ.

6. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ

ಆಗುತ್ತಿರುವ ತೊಂದರೆಗಳ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ಉಪ ವಿಭಾಗ ಮಟ್ಟದ ಜಾಗೃತಿ ಸಮಿತಿಯ ನಾಮನಿರ್ದೇಶಿತ ಸದಸ್ಯರುಗಳ ಅಭಿಪ್ರಾಯವನ್ನು ಸಂಗ್ರಹಿಸಲು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಬಗ್ಗೆ ವಿವರಿಸುವ ಕುರಿತು ಒಂದು ದಿನದ ಕಾರ್ಯಗಾರವನ್ನು ನಡೆಸಲಾಗಿದೆ.

7. ರಾಜ್ಯ ಮೇಲ್ವಿಚಾರಣಾ ಸಮಿತಿಯ ಅಧ್ಯಕ್ಷರಾದ ಸಮಾಜ ಕಲ್ಯಾಣ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರುಗಳ ಸದಸ್ಯತ್ವದೊಂದಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಸಲು 3ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನಡೆಸಲಾಯಿತು.

8. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ನೀಡುವ ಮಾಸಿಕ ಪಿಂಚಣಿ, ಶೈಕ್ಷಣಿಕ, ಅನುಕಂಪದ ಆಧಾರದ ಮೇಲೆ ನೇಮಕಾತಿ, ಆರೋಗ್ಯ ಸೌಲಭ್ಯಗಳನ್ನು ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ ಒಳಚರಂಡಿ/ ತೆರೆದ ಚರಂಡಿಗಳ ಸ್ವಚ್ಛತಾ ಕಾರ್ಯನಿರ್ವಹಿಸುವಾಗ ಮೃತಪಟ್ಟ ಕುಟುಂಬದ ಅವಲಂಭಿತರಿಗೂ ವಿಸ್ತರಿಸಲು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

9. ಮ್ಯಾನ್ಯುಯಲ್ ಸ್ಕ್ಯಾವೇಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013 ಕಾಯ್ದೆ ಹಾಗೂ ನಿಯಮಗಳು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2012 ಕಾಯ್ದೆ ಹಾಗೂ ನಿಯಮಗಳ ಬಗ್ಗೆ ಸಾರ್ವಜನಿಕರು ವಿವಿಧ ಇಲಾಖಾ ಅಧಿಕಾರಿಗಳಲ್ಲಿ ಅರಿವು ಮೂಡಿಸುವ ಸಂಬಂಧ 5000 ಪುಸ್ತಕಗಳನ್ನು ಮುದ್ರಿಸಿ, ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಂಟಿ/ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ನಗರ ಸ್ಥಳೀಯ ಸಂಸ್ಥೆಯ ಎಲ್ಲಾ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ವಿತರಿಸಲು ಕ್ರಮವಹಿಸಲಾಗುತ್ತಿದೆ.

10. ರಾಜ್ಯದಲ್ಲಿ ಮಲ ಹೊರುವ, ಮಲಗುಂಡಿಗಳನ್ನು ಸ್ವಚ್ಛ ಮಾಡುವ ಕಾರ್ಮಿಕರ ಹಾಗೂ ಪೌರಕಾರ್ಮಿಕರ ಸ್ಥಿತಿ-ಗತಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಕಾನೂನಾತ್ಮಕ ಸ್ಥಿತಿಗತಿಗಳ ಸ್ಥಾನಮಾನ ಕುರಿತು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ರವರು ನಡೆಸಿದ ಸಂಶೋಧನೆ ಕರಡು ವರದಿಯನ್ನು ಅಂಗೀಕರಿಸಿ ಅನುಮೋದಿಸಲಾಯಿತು.

11. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಕಾಯ್ದೆ ಮತ್ತು ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಸುವ

ಹಾಗೂ ಅರಿವು ಮೂಡಿಸುವ ಸಂಬಂಧ 5-10 ನಿಮಿಷಗಳ ಕಾಲ ಆನಿಮೇಶನ್ ಸಾಕ್ಷ್ಯಚಿತ್ರ ಸಿದ್ಧಪಡಿಸಿ ವಾಟ್ಸ್‌ಆಪ್, ಯೂಟ್ಯೂಬ್ ಇತರೆ ಜಾಲತಾಣಗಳ ಮೂಲಕ ಪ್ರಚಾರ ಪಡಿಸಿ ಅರಿವು ಮೂಡಿಸಲು ಕ್ರಮವಹಿಸಲಾಗುತ್ತಿದೆ.

12. ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿದ್ದ ಸಮಯದಲ್ಲಿ ಬೆಂಗಳೂರು ನಗರ ವಿವಿಧ ವಾರ್ಡ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರ (ಕೋವಿಡ್-19 ವಾರಿಯರ್ಸ್) ರವರ ಕಾರ್ಯನಿರ್ವಹಣಾ ಅವಧಿಯ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಹಾಗೂ ಅವರಿಗೆ ಆ ಸಂಧರ್ಭದಲ್ಲಿ ಉಪಯೋಗಿಸಲು ಸರ್ಕಾರವು ನೀಡಿದ ಸುರಕ್ಷತಾ ಸಾಧನಗಳ ಬಗ್ಗೆ ಮೇಲ್ವಿಚಾರಣೆ ಮಾಡಲು ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿ ಕುಂದುಕೊರತೆಗಳ ಬಗ್ಗೆ ಸರಿಪಡಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಲಾಯಿತು.

13. ಕೋವಿಡ್-19 ಮಾರಣಾಂತಿಕ ಸೊಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಕಂಟೈನ್‌ಮೆಂಟ್ ಜೋನ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರಿಗೆ ಆರೋಗ್ಯ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ನಿಗಧಿಪಡಿಸಿದ ಸುರಕ್ಷತಾ ಪರಿಕರಗಳ ವಿತರಣೆ, ಪೌರಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ, ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳ ವಿವರ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಮತ್ತು ಉಪಯೋಗಿಸುತ್ತಿರುವ ತಂತ್ರಜ್ಞಾನಗಳ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಯಿತು.

14. ದಿನಾಂಕ:27.08.2020 ರಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ 3ನೇ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯನ್ನು ನಡೆಸಲಾಯಿತು.

15. ಎಂ.ಎಸ್.ಕಾಯ್ದೆ & ನಿಯಮ 2013ರ ವಿವಿಧ ಸೆಕ್ಷನ್‌ಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರಿ ಆದೇಶಗಳನ್ನು ಹೊರಡಿಸಲಾಯಿತು.

**ಶ್ರೀ ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರು, ದಿನಾಂಕ:11.12.2020ರಂದು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಶ್ರೇಯೋಭಿವೃದ್ಧಿಗಾಗಿ ನಡೆಸಿದ ಸಭೆ.**

***

**ಪ್ರಮುಖ ನ್ಯೂನ್ಯತೆಗಳು:**

1. ಗುತ್ತಿಗೆದಾರರು ಲೋಡರ್ಸ್/ಕ್ಲೀನರ್ಸ್/ಡ್ರೈವರ್‌ಗಳಿಗೆ ಮತ್ತು ಪೌರಕಾರ್ಮಿಕರಿಗೆ ಇ.ಎಸ್.ಐ/ಪಿ.ಎಫ್ ಪಾವತಿಯಾಗುತ್ತಿರುವುದರ ಬಗ್ಗೆ ಮತ್ತು ವೇತನ ಪ್ರಮಾಣ ಪತ್ರ ನೀಡದಿರುವುದು.
2. ಮಹಾನಗರ ಪಾಲಿಕಾ ವ್ಯಾಪ್ತಿಯಲ್ಲಿ ಕಾರ್ಮಿಕ ಇಲಾಖಾ ಆದೇಶದಂತೆ ಶೌಚಾಲಯದ ವ್ಯವಸ್ಥೆ, ವಿಶ್ರಾಂತಿ ಗೃಹ, ಉಪಾಹಾರವನ್ನು ಸೇವಿಸಲು ಸೂಕ್ತ ಸ್ಥಳ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸದೇ ಇರುವುದು.
3. ಲೋಡರ್ಸ್/ಕ್ಲೀನರ್ಸ್‌ಗಳು ಮತ್ತು ಪೌರಕಾರ್ಮಿಕರಿಗೆ ಸುರಕ್ಷತಾ ಪರಿಕರಗಳನ್ನು ಧರಿಸದೇ ಕಾರ್ಯನಿರ್ವಹಿಸುತ್ತಿರುವುದು.
4. ಬಿಬಿಎಂಪಿ ವ್ಯಾಪ್ತಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿರುತ್ತದೆ ಆದರೆ ಈವರೆಗೂ NSKFDC ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವುದಿಲ್ಲ ಹಾಗೂ ಅವರಿಗೆ ಪುನರ್ವಸತಿ ನೀಡಿರುವುದಿಲ್ಲ.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಗುತ್ತಿಗೆದಾರರು ಲೋಡರ್ಸ್/ಕ್ಲೀನರ್ಸ್/ಡ್ರೈವರ್‌ಗಳಿಗೆ ಮತ್ತು ಪೌರಕಾರ್ಮಿಕರಿಗೆ ಕನಿಷ್ಟ ವೇತನ, ಇ.ಎಸ್.ಐ, ಪಿ.ಎಫ್ ಮತ್ತು ವೇತನ ಪ್ರಮಾಣ ಪತ್ರ ಪಾವತಿಯಾಗುತ್ತಿರುವ ಬಗ್ಗೆ ಜಂಟಿ ಆಯುಕ್ತರು ಪರಿಶೀಲನೆ ನಡೆಸುವುದು.
2. ಅಸ್ತಿತ್ವದಲ್ಲಿರುವ ಇನ್‌ಸ್ಯಾನಿಟರಿ ಲೆಟ್ರಿನ್‌ಗಳು ಮತ್ತು ಸ್ಯಾನಿಟರಿ ಲೆಟ್ರಿನ್‌ಗಳಾಗಿ ಮಾರ್ಪಡಿಸಿರುವ ಫೋಟೋ ಮತ್ತು ದಾಖಲಾತಿಗಳನ್ನು 15 ದಿನಗಳೊಳಗಾಗಿ ಆಯೋಗಕ್ಕೆ ಸಲ್ಲಿಸುವುದು.
3. ಸ್ಕ್ಯಾವೆಂಜಿಂಗ್ ಮುಕ್ತ ರಾಜ್ಯವನ್ನಾಗಿಸಲು ಡಿಸೆಂಬರ್ ಮಾಹೆಯೊಳಗಾಗಿ ಸಮೀಕ್ಷೆ ಮುಕ್ತಾಯಗೊಳಿಸಿ NSKFDC ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿ 9 ತಿಂಗಳೊಳಗಾಗಿ ಪುನರ್ವಸತಿ ಕಲ್ಪಿಸುವುದು.
4. ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಧರಿಸದೇ ಕಾರ್ಯನಿರ್ವಹಿಸುವುದು ಕಂಡುಬಂದಲ್ಲಿ ಸಂಬಂಧಪಟ್ಟ ಹಿರಿಯ ಹಾಗೂ ಕಿರಿಯ ಆರೋಗ್ಯ ನಿರೀಕ್ಷಕರ ಮೇಲೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ನಡವಳಿಯ ಪ್ರಕಾರ ರೂ.10,000/- ದಂಡ ವಿಧಿಸುವುದು.

**ದಿನಾಂಕ:04.01.2021ರಂದು ಶ್ರೀ.ಎಂ.ಶಿವಣ್ಣ(ಕೋಟೆ), ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಶ್ರೀ.ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಮಹದೇಶ್ವರ ಬೆಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಪರಿಶೀಲನಾ ಸಭೆ**

***

**ಪ್ರಮುಖ ನ್ಯೂನ್ಯತೆಗಳು:**

1. ಪ್ರಾಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಕಾರ್ಮಿಕರನ್ನು ಖಾಯಂಗೊಳಸದೇ ಇರುವುದು.
2. 2014-15 ರಿಂದ ಇಲ್ಲಿಯವರೆಗೆ ಪ್ರತಿ ಕಾರ್ಮಿಕರಿಗೂ ಕನಿಷ್ಟ ವೇತನ, ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸದೇ ಇರುವುದು.
3. ಮಲೈ ಮಹದೇಶ್ವರ ಪ್ರಾದಿಕಾರದಲ್ಲಿ ಹೆಚ್ಚು ಭಕ್ತಾಧಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಸಮುದಾಯ ಶೌಚಾಲಯಗಳನ್ನು ನಿರ್ಮಾಣ ಮಾಡದೇ ಇರುವುದು.
4. ಪೌರಕಾರ್ಮಿಕರಿಗೆ ವಸತಿ ಸೌಲಭ್ಯಗಳನ್ನು ನೀಡದಿರುವುದು.
5. ಎಲ್ಲಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಎಲ್ಲಾ ಕಾರ್ಮಿಕರನ್ನು ಖಾಯಂಗೊಳಸಲು ಪ್ರಸ್ತಾವನೆಯನ್ನು 7 ದಿನಗಳೊಳಗಾಗಿ ಸರ್ಕಾರಕ್ಕೆ ಕಳುಹಿಸುವುದು.
2. ಪ್ರತಿಕಾರ್ಮಿಕರಿಗೂ ಇಎಸ್ಐ ಕಾರ್ಡ್‌ನ್ನು ವಿತರಣೆ ಮಾಡುವುದು.
3. ಕಾರ್ಮಿಕ ಇಲಾಖೆಯ ಆದೇಶದನ್ವಯ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಕಂಪನಿಗಳಿಂದ ಕಾರ್ಮಿಕರ ಅಳತೆಗೆ ತಕ್ಕಂತೆ ಉತ್ತಮ ಗುಣಮಟ್ಟದ ಪರಿಕರಗಳನ್ನು ಕಾರ್ಮಿಕರಿಗೆ ವಿತರಿಸಿ ಕಾರ್ಮಿಕರು ಕಡ್ಡಾಯವಾಗಿ ಧರಿಸಿ ಕಾರ್ಯನಿರ್ವಹಿಸುವಂತೆ ಪ್ರಾಧಿಕಾರದ ಅಧಿಕಾರಿಗಳು ಅಗತ್ಯ ಕ್ರಮವಹಿಸುವುದು.
4. ಮಲೈ ಮಹದೇಶ್ವರ ಪ್ರಾದಿಕಾರದಲ್ಲಿ ಹೆಚ್ಚು ಭಕ್ತಾಧಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚು ಸಮುದಾಯ ಶೌಚಾಲಯಗಳನ್ನು ನಿರ್ಮಾಣ ಮಾಡುವುದು.
5. ಕಡ್ಡಾಯವಾಗಿ 3 ತಿಂಗಳಗೊಮ್ಮೆ ನುರಿತ ವೈದ್ಯರಿಂದ ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿ ಕಾರ್ಮಿಕರಿಗೆ ಕಂಡುಬರುವ ಖಾಯಿಲೆಗಳಗೆ ಪ್ರಾಧಿಕಾರದ ವತಿಯಿಂದ ಚಿಕಿತ್ಸೆ ನೀಡುವುದು.
6. ಕಡ್ಡಾಯವಾಗಿ ಮಲೈ ಮಹದೇಶ್ವರ ಬೆಟ್ಟದಲ್ಲಿರುವ ಮಳಿಗೆಗಳಲ್ಲಿ ಸಫಾಯಿ ಕರ್ಮಚಾರಿ/ಪೌರಕಾರ್ಮಿಕರ ಅವಲಂಬಿತರಿಗೆ ಶೇ.5ರಷ್ಟು ಅಂಗಡಿಗಳನ್ನು ಕಾಯ್ದಿರಿಸುವುದು.

**ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರು, ದಿನಾಂಕ:15.01.2021ರಂದು ಟೌನ್‌ಹಾಲ್‌ನಲ್ಲಿ ಸಫಾಯಿ ಕರ್ಮಚಾರಿಗಳು ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ, 2013ರ ಕಾಯ್ದೆ ಮತ್ತು ನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಇರುವ ಸಮಸ್ಯೆಗಳ ಬಗ್ಗೆ ಕಾರ್ಯಗಾರ**

***

**ಪ್ರಮುಖ ನ್ಯೂನ್ಯತೆಗಳು:**

1. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬದ ಅವಲಂಬಿತರ ಮಕ್ಕಳಿಗೆ ಶಾಲಾ ಶುಲ್ಕ ಮರುಪಾವತಿಸದೇ ಇರುವುದು.
2. ಕೆಲಸ ನಿರ್ವಹಿಸುವಾಗ ಪೌರಕಾರ್ಮಿಕರು ಮೃತಪಟ್ಟಲ್ಲಿ ಅವರ ಕುಟುಂಬದ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕಲ್ಪಿಸದೇ ಇರುವುದು.
3. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಗುರುತಿನ ಚೀಟಿ ನೀಡದೇ ಇರುವುದು.
4. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಕುಟುಂಬದ ಮಕ್ಕಳಿಗೆ ಸರ್ಕಾರದ ವತಿಯಿಂದ ಶಾಲಾ ಶುಲ್ಕವನ್ನು ಭರಿಸುವುದು.
2. ಸಫಾಯಿ ಕರ್ಮಚಾರಿಗಳು ನಿವೃತ್ತಿಗೂ ಮೊದಲು ಮರಣ ಹೊಂದಿದಲ್ಲಿ ಅವರ ಕುಟುಂಬದ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಕಲ್ಪಿಸುವುದು.
3. ಕಡ್ಡಾಯವಾಗಿ ಪೌರಕಾರ್ಮಿಕರಿಗೆ ಗುರುತಿನ ಚೀಟಿ ನೀಡಿ ಸರ್ಕಾರದ ಸವಲತ್ತುಗಳನ್ನು ವಿತರಿಸುವುದು.
4. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳು ಮತ್ತು ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಮೃತಪಟ್ಟ ಕಾರ್ಮಿಕರ ಕುಟುಂಬದ ಅವಲಂಬಿತರಿಗೆ ಪುನರ್ವಸತಿ ಕಲ್ಪಿಸುವುದು.

**ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರು, ದಿನಾಂಕ:24.01.2021 ಬೆಳಗ್ಗೆ 11.00 ಗಂಟೆಗೆ ಬಳ್ಳಾರಿ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಮಸ್ಯೆಗಳ ಕುರಿತ ಸಭೆ**.

***

**ಪ್ರಮುಖ ನ್ಯೂನ್ಯತೆಗಳು:**

**ಬಳ್ಳಾರಿ ಮಹಾನಗರ ಪಾಲಿಕೆ**

1. ಯುಜಿಡಿ ವರ್ಕರ್ಸ್ ಮತ್ತು ಆಟೋ ಟಿಪ್ಪರ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡ್ರೈವರ್‌ಗಳ ಪಟ್ಟಿಯನ್ನು ನೇರನೇಮಕಾತಿಯಡಿಯಲ್ಲಿ ಸೇರಿಸದೇ ಇರುವುದು.
2. ಪೌರಕಾರ್ಮಿಕರು ವಾಸಿಸುತ್ತಿರುವ ಮನೆಗಳು ದುರಸ್ಥಿ ಆಗದೇ ಇರುವುದು.
3. ಪಿ.ಎಫ್ ಮತ್ತು ಇ.ಎಸ್.ಐ ಮೊತ್ತವನ್ನು ಪಾವತಿ ಮಾಡದಿರುವುದು.
4. ಉಪಹಾರ ಭತ್ಯೆ ರೂ. 20/- ರಿಂದ ರೂ.30/-ಗಳಿಗೆ ಪರಿಷ್ಕರಿಸುವುದು.
5. ಎಂ.ಎಸ್.ಕಾಯ್ದೆ ಮತ್ತು ನಿಯಮಗಳು 2013ರ ಪ್ರಕಾರ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನವರ್ಸತಿ ಕಲ್ಪಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:**

1. ಸಣ್ಣ ಹನುಮಂತಪ್ಪ ಎಂಬುವವರನ್ನು ಚುನಾವಣಾ ಗುರುತಿನ ಚೀಟಿಯಲ್ಲಿ ನಮೂದಾಗಿರುವ ಹುಟ್ಟಿದ ದಿನಾಂಕದ ಆಧಾರದ ಮೇಲೆ ಸೇವೆಯಿಂದ ಬಿಡುಗಡೆಗೊಳಿಸಿರುತ್ತಾರೆ. ಆದರೆ ವರ್ಗಾವಣೆ ಪ್ರಮಾಣಪತ್ರ (ಟಿಸಿ) ಹಾಗೂ ಆಧಾರ್‌ಕಾರ್ಡ್‌ನ ಪ್ರಕಾರ ಸೇವೆಯಲ್ಲಿ ಮುಂದುವರೆಯಲು ಅರ್ಹರಿದ್ದು, ಪುನಃ ಇವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು.
2. ಸರ್ಕಾರದ ಆದೇಶದನ್ವಯ ಅರ್ಹರಿದ್ದಲ್ಲಿ 23 ಜನರ ಕಾರ್ಮಿಕರನ್ನು ನೇಮಕಾತಿಗೊಳಿಸುವುದು.
3. ಯುಜಿಡಿ ವರ್ಕರ್ಸ್ ಮತ್ತು ಆಟೋ ಟಿಪ್ಪರ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಡ್ರೈವರ್‌ಗಳನ್ನು ನೇರ ನೇಮಕಾತಿಯಡಿಯಲ್ಲಿ ಸೇರ್ಪಡೆಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವುದು.
4. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಹಕ್ಕುಪತ್ರಗಳನ್ನು ವಿತರಿಸುವುದು.
5. ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸಿ ಖಾಯಂಗೊಂಡಿರುವ ಎಲ್ಲಾ ಪೌರಕಾರ್ಮಿಕರಿಗೂ ಪಿಎಫ್ ಹಣವನ್ನು ಪಾವತಿಸುವುದು.
6. ಸರ್ಕಾರದ ಆದೇಶದನ್ವಯ ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸಲು ಕಾರಣರಾಗುವ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವುದು.
7. ಪೌರಕಾರ್ಮಿಕರಿಗೆ ಉತ್ತಮ ಗುಣಮಟ್ಟದ ಉಪಾಹಾರವನ್ನು ನೀಡಲು ರೂ.20/-ಗಳಿಂದ ರೂ.30/-ಗಳಿಗೆ ಪರಿಷ್ಕರಿಸುವುದು.

**ದಿನಾಂಕ:04.02.2021ರಂದು ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಕೇಂದ್ರೀಯ ವಿಶ್ವವಿದ್ಯಾನಿಲಯದ ಸ್ವಚ್ಛತಾ ನೌಕರರ ಕುಂದುಕೊರತೆಗಳ ಪರಿಶೀಲನಾ ಸಭೆ ಪ್ರಮುಖ ನ್ಯೂನ್ಯತೆಗಳು.**

1. ವಿಶ್ವವಿದ್ಯಾನಿಲಯದ ವಿಸ್ತೀರ್ಣಕ್ಕೆ ತಕ್ಕಂತೆ ಸ್ವಚ್ಛತಾ ಕಾರ್ಮಿಕರನ್ನು ನೇಮಿಸದೇ ಇರುವುದು.
2. ಇ.ಎಸ್.ಐ ಮತ್ತು ಪಿ.ಎಫ್ ಪಾವತಿಯಾಗಿಲ್ಲದಿರುವುದು.
3. ಸುರಕ್ಷತಾ ಪರಿಕರಗಳ ಉಪಯೋಗದ ಬಗ್ಗೆ ಕಾರ್ಮಿಕರಿಗೆ ಅರಿವು ಇಲ್ಲದೇ ಇರುವುದು.
4. ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿಸದೇ ಇರುವುದು.
5. ವಿಶ್ವ ವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ನೀಡದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:**

1. ವಿಶ್ವವಿದ್ಯಾಲಯದ ಸ್ವಚ್ಛತಾ ವಿಸ್ತೀರ್ಣಕ್ಕೆ ತಕ್ಕಂತೆ ಕಾರ್ಮಿಕರನ್ನು ನೇಮಿಸಲು ಸರ್ಕಾರಕ್ಕೆ ತುರ್ತಾಗಿ ಪ್ರಸ್ತಾವನೆಯನ್ನು ಕಳುಹಿಸುವುದು.
2. ವಿಶ್ವವಿದ್ಯಾಲಯಕ್ಕೆ ಭೇಟಿ ನೀಡದೆ ಕರ್ತವ್ಯ ಲೋಪ ಮಾಡಿರುವ ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದು.
3. ಪ್ರತಿ ಮಾಹೆ ಕಾರ್ಮಿಕರಿಗೆ ಪಿ.ಎಫ್. ಮತ್ತು ಇ.ಎಸ್.ಐನ್ನು ಪಾವತಿಯಾಗುತ್ತಿರುವ ಬಗ್ಗೆ ಅಧಿಕಾರಿಗಳು ಖಾತ್ರಿಪಡಿಸಿಕೊಂಡು ನಂತರ ಗುತ್ತಿಗೆದಾರರಿಗೆ ಪಿ.ಎಫ್. ಮತ್ತು ಇ.ಎಸ್.ಐ ಮೊತ್ತವನ್ನು ಬಿಡುಗಡೆಗೊಳಿಸುವುದು.
4. ಸುರಕ್ಷತಾ ಪರಿಕರಗಳನ್ನು ತೊಡುವುದರ ಬಗ್ಗೆ ಹಾಗೂ ಇವುಗಳನ್ನು ಧರಿಸದೇ ಇದ್ದರೆ ಮಾರಣಾಂತಿಕ ಖಾಯಿಲೆಗಳಿಂದ ಮೃತಪಡುತ್ತಿರುವ ಬಗ್ಗೆ ನುರಿತ ವೈದ್ಯರಿಂದ ಅರಿವು ಮೂಡಿಸುವುದು.
5. ಎಲ್ಲಾ ಸ್ವಚ್ಛತಾ ಕೆಲಸಗಾರರಿಗೆ ನುರಿತ ವೈದ್ಯರಿಂದ 3 ತಿಂಗಳಿಗೊಮ್ಮೆ ಮಾಸ್ಟರ್ ಆರೋಗ್ಯ ತಪಾಸಣೆಯನ್ನು ಮಾಡಿಸುವುದು.
6. ಮ್ಯಾನ್‌ಹೋಲ್ ಬ್ಲಾಕೇಜ್ ಕಂಡು ಬಂದಲ್ಲಿ ಕಡ್ಡಾಯವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿಯನ್ನು ಸಂಪರ್ಕಿಸಿ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳ ಮುಖಾಂತರ ಸ್ವಚ್ಛಗೊಳಿಸುವುದು.

**ದಿನಾಂಕ:10.02.2021ರಂದು ಶ್ರೀ ಶಿವಣ್ಣ ಎಂ (ಕೋಟೆ), ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಬಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆ**.

***

**ಪ್ರಮುಖ ನ್ಯೂನ್ಯತೆಗಳು:**

1. ಕೆಲವು ಜಿಲ್ಲೆಗಳಲ್ಲಿ ಇನ್‌ಸ್ಯಾನಿಟರಿ ಲೆಟ್ರಿನ್‌ಗಳು ಅಸ್ತಿತ್ವದಲ್ಲಿ ಇರುವುದು.
2. ಪೌರಕಾರ್ಮಿಕರಿಗೆ ಕನಿಷ್ಠ ವೇತನ, ಇ.ಎಸ್.ಐ ಮತ್ತು ಪಿ.ಎಫ್ ಸೌಲಭ್ಯವು ವ್ಯವಸ್ಥಿತವಾಗಿ ದೊರೆಯದೆ ಇರುವುದು.
3. 3 ತಿಂಗಳಗೊಮ್ಮೆ ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿಸದೇ ಇರುವುದು.
4. ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಖರೀದಿ, ದುರಸ್ತಿಗೊಳಸದೇ ಇರುವುದು.
5. ಪುನರ್ವಸತಿ ಸೌಲಭ್ಯ ಕಲ್ಪಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಇನ್‌ಸ್ಯಾನಿಟರಿಗಳು ಲೆಟ್ರಿನ್ ಅಸ್ತಿತ್ವದಲ್ಲಿರಲು ಕಾರಣವಾಗಿರುವ ಅಧಿಕಾರಿಗಳ ಮೇಲೆ ಜಿಲ್ಲಾಡಳಿತವು ಕಾಯ್ದೆಯನುಸಾರ ಕ್ರಮ ಕೈಗೊಳ್ಳುವುದು ಹಾಗೂ ಸ್ಯಾನಿಟರಿ ಲೆಟ್ರಿನ್‌ಗಳಾಗಿ ಪರಿವರ್ತಿಸುವುದು.
2. 2013-14 ರಿಂದ ನೇರವೇತನಗೊಳಸುವವರೆಗೂ ಕನಿಷ್ಠ ವೇತನ ಪಿ.ಎಫ್, ಇ.ಎಸ್.ಐ ಪಾವತಿಯಾಗಿರುವ ಬಗ್ಗೆ ಜಂಟಿಯಾಗಿ ಪರಿಶೀಲಿಸುವುದು.
3. ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಆಸ್ಪತ್ರೆ, ಕೆಎಸ್‌ಆರ್‌ಟಿಸಿ, ಕೆಇಬಿ, ಪೋಲೀಸ್ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ 3 ತಿಂಗಳಗೊಮ್ಮೆ ಆರೋಗ್ಯ ತಪಾಸಣೆ ನಡೆಸುವುದು.
4. ಜಿಲ್ಲಾ ವ್ಯಾಪ್ತಿಯಲ್ಲಿ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳನ್ನು ಹೊಂದಿರುವುದರ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡುವುದು. ಸದರಿ ಯಂತ್ರಗಳು ದುರಸ್ತಿಗೊಂಡ ನಂತರ ತುರ್ತಾಗಿ ಅವುಗಳನ್ನು ಸುವ್ಯವಸ್ಥೆ ಮಾಡುವುದು.
5. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಿಂಗಲ್ ಪಿಟ್ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ಕಡ್ಡಾಯವಾಗಿ ತಾಲೂಕು ಮಟ್ಟದಲ್ಲಿ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಖರೀದಿಸುವುದು.
6. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪಿಟ್‌ಗುಂಡಿಗಳನ್ನು ಸ್ವಚ್ಛಗೊಳಸಲು ಮಾನವ ಸಂಪನ್ಮೂಲವನ್ನು ಬಳಸುವುದು 2013ರ ಪ್ರಕಾರ ಶಿಕ್ಷಾರ್ಹ ಅಪರಾಧ ಹಾಗೂ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳಂದ ಮಾತ್ರ ಪಿಟ್‌ಗುಂಡಿಗಳನ್ನು ಸ್ವಚ್ಛಗೊಳಸುವಂತೆ ಅರಿವು ಮೂಡಿಸುವುದು.
7. ಮೃತರ ಕುಟುಂಬದ ಅವಲಂಬಿತರಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದಿಂದ ಪುನರ್ವಸತಿ ಕಲ್ಪಿಸುವುದು.
8. ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಯನ್ವಯ ಸಂಬಂಧಪಟ್ಟಂತಹ ಆರೋಗ್ಯ ನಿರೀಕ್ಷಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದು.

**ದಿನಾಂಕ:15.02.2021ರಂದು ಶ್ರೀ.ಎಂ.ಶಿವಣ್ಣ (ಕೋಟೆ), ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಸರಗೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕುಂದುಕೊರತೆಗಳ ಸಭೆ.**

*****

**ಪ್ರಮುಖ ನ್ಯೂನತೆಗಳು:**

1. ಖಾಲಿ ಇರುವ ಹುದ್ದೆಗಳು ಭರ್ತಿಯಾಗದಿರುವುದು.
2. ಸುರಕ್ಷತಾ ಪರಿಕರಗಳನ್ನು ನೀಡದಿರುವುದು.
3. ವಸತಿ ಸೌಲಭ್ಯ ಕಲ್ಪಿಸದಿರುವುದು.
4. ಮಾಸ್ಟರ್ ಆರೋಗ್ಯ ತಪಾಸಣೆ ಮಾಡಿಸದೇ ಇರುವುದು.
5. ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಸಾರ್ವಜನಿಕ ಶೌಚಾಲಯ ನಿರ್ವಹಣೆ ನೀಡದೆ ಇರುವುದು.
6. ಸ್ವಚ್ಛತಾ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಿಸದೇ ಇರುವುದು.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಪಟ್ಟಣ ಪಂಚಾಯಿತಿಯಲ್ಲಿ ಖಾಲಿಯಿರುವ ಅನುಮೋದನೆಗೊಂಡಿರುವ 4 ಹುದ್ದೆಗಳಿಗೆ ನೇರವೇತನದಡಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂಗೊಳಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವುದು. ಕಾರ್ಮಿಕ ಅಧಿಕಾರಿಗಳು, ಪಿ.ಎಫ್ ಅಧಿಕಾರಿಗಳು ಮತ್ತು ಇಎಸ್ಐ ಅಧಿಕಾರಿಗಳು 2013 ರಿಂದ ಇಲ್ಲಿಯ ತನಕ ಕನಿಷ್ಟ ವೇತನ, ಇಎಸ್ಐ, ಪಿ.ಎಫ್ ಪಾವತಿಯಾಗುತ್ತಿರುವುದರ ಬಗ್ಗೆ ಪರಿಶೀಲನೆ ನಡೆಸುವುದು.
2. ಕಾರ್ಮಿಕರ ಅಳತೆಗೆ ತಕ್ಕಂತೆ ಹಾಗೂ ಉತ್ತಮ ಗುಣಮಟ್ಟದ ಸುರಕ್ಷತಾ ಪರಿಕರಗಳನ್ನು ತೊಟ್ಟು ಕಾರ್ಯನಿರ್ವಹಿಸುವುದು.
3. ಸುರಕ್ಷತಾ ಪರಿಕರಗಳನ್ನು ತೊಡದೇ ಇರುವುದು ಕಂಡುಬಂದಲ್ಲಿ ಅಂತಹವರ ಮೇಲೆ ಸರ್ಕಾರದ ಆದೇಶದನ್ವಯ ದಂಡವನ್ನು ವಿಧಿಸುವುದು.
4. ಮಾನ್ಯ ಮುಖ್ಯ ಕಾರ್ಯದರ್ಶಿಗಳ ನಡವಳಿಯನ್ವಯ ಸ್ವಚ್ಛತಾ ಕಾರ್ಯವನ್ನು ಪೌರಕಾರ್ಮಿಕರು ನಿರ್ವಹಿಸುತ್ತಿರುವುದರಿಂದ ಪೌರಕಾರ್ಮಿಕರ ಹಾಗೂ ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಹಾಗೂ ಕುಟುಂಬದ ಅವಲಂಬಿತರಿಗೆ ಶೌಚಾಲಯ ನಿರ್ವಹಣೆ ಮಾಡಲು ಆದೇಶ ನೀಡುವುದು.
5. ನುರಿತ ವೈದ್ಯರಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರತಿ ಕಾರ್ಮಿಕರಿಗೂ ಕಡ್ಡಾಯವಾಗಿ ಮಾಸ್ಟರ್ ಆರೋಗ್ಯ ತಪಾಸಣೆಯನ್ನು ಮಾಡಿಸುವುದು. ಕೋವಿಡ್-19ರ ಸಂದರ್ಭದಲ್ಲಿ ಸರ್ಕಾರದಿಂದ ಹೊರಡಿಸಿರುವ ನಿರ್ದೇಶನಗಳನ್ವಯ ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ವಿತರಿಸುವುದು.
6. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಪುರಸಭೆಯ ಮುಖ್ಯಾಧಿಕಾರಿಗಳು ಸಫಾಯಿ ಕರ್ಮಚಾರಿಗಳ ಕಾಲೋನಿಗೆ ಭೇಟಿ ನೀಡಿ ಸಫಾಯಿ ಕರ್ಮಚಾರಿಗಳ ಕುಟುಂಬದ ಮಕ್ಕಳನ್ನು ಪಟ್ಟಿ ಮಾಡಿ ಶಿಕ್ಷಣ ದೊರಕಿಸಿಕೊಡಲು, ವಿದ್ಯಾರ್ಥಿ ವೇತನ ಮತ್ತು ತರಬೇತಿ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು.

**ದಿನಾಂಕ:25.02.2021ರಂದು ಮಾನ್ಯ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಮದ್ದೂರು ಪುರಸಭಾ ಕಛೇರಿಯಲ್ಲಿ ಶ್ರೀ.ಆರ್.ನಾರಾಯಣ, ಪೌರಕಾರ್ಮಿಕರು, ಪುರಸಭೆ ಮದ್ದೂರುರವರು ಆತ್ಮಹತ್ಯೆ ಮಾಡಿಕೊಂಡ ಕುರಿತು ಮಾಹಿತಿ ಸಂಗ್ರಹಿಸಲು ನಡೆದ ಸಭೆ.**

***

**ಸಭೆಯಲ್ಲಿ ಚರ್ಚಿಸಿದ ಮುಖ್ಯ ವಿಷಯಗಳು:**

1. ಮೃತ ಕುಟುಂಬಕ್ಕೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಿಕೊಡುವ ಬಗ್ಗೆ.
2. ಅಧಿಕಾರಿಗಳ ವಿರುದ್ಧ ಕಾನೂನು ರೀತಿ ಕ್ರಮಕೈಗೊಳ್ಳುವ ಬಗ್ಗೆ.

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಮೃತರ ಮಕ್ಕಳ ಹೆಸರಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ದೌರ್ಜನ್ಯ ಕಾಯ್ದೆಯ ಪ್ರಕಾರ ನೀಡಬೇಕಾಗಿರುವ ರೂ.4,12,500/-ಗಳ ಪರಿಹಾರದ ಬಾಂಡ್‌ನ್ನು ಮತ್ತು ಮದ್ದೂರು ಪುರಸಭೆಯಿಂದ ಮೃತರಿಗೆ ನೀಡಬೇಕಾಗಿರುವ ಎನ್‌ಕ್ಯಾಷ್‌ಮೆಂಟ್ ಪರಿಹಾರವನ್ನೂ ಸಹ ವಿತರಿಸಲಾಯಿತು.
2. ಬಾಕಿ ಪರಿಹಾರ ಹಣವನ್ನು ಚಾರ್ಜ್‌ಶೀಟ್ ಸಲ್ಲಿಸಿದ ನಂತರ ವಿತರಿಸಲು ನಿರ್ದೇಶಿಸಿದರು.
3. ಸಮಾಜ ಕಲ್ಯಾಣ ಇಲಾಖೆಯಿಂದ ಅವಲಂಬಿತರ ಮಕ್ಕಳಗೆ ಪ್ರತಿಷ್ಠಿತ ವಸತಿ ಶಾಲೆಗಳಲ್ಲಿ ಪ್ರವೇಶವನ್ನು ಕಲ್ಪಿಸುವುದು.
4. ಕಿರುಕುಳ ನೀಡುತ್ತಿರುವ ಪುರಸಭೆಯ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. ಶೀಘ್ರವೇ ತಪ್ಪಿತಸ್ಥರ ವಿರುದ್ಧ ಚಾರ್ಜ್‌ಶೀಟ್‌ನ್ನು ಹಾಕಿ ಅಗತ್ಯ ಕ್ರಮ ಕೈಗೊಳ್ಳುವುದು.
5. ಮೃತರ ಮಕ್ಕಳಗೆ ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯಡಿಯಲ್ಲಿ ವಸತಿಯನ್ನು ಕಲ್ಪಿಸುವುದು.
6. ಮೃತರ ಮಕ್ಕಳು ಚಿಕ್ಕ ವಯಸ್ಸಿನವರಾಗಿರುವುದರಿಂದ 18 ವರ್ಷ ತುಂಬಿದ ನಂತರ ಜಿಲ್ಲಾಡಳಿತವು ಸರ್ಕಾರಿ ಉದ್ಯೋಗವನ್ನು ಕಲ್ಪಿಸುವುದು.
7. ಮೃತರ ಸಾವಿಗೆ ಸಂಬಂಧಿಸಿದಂತೆ ಪೋಲೀಸ್ ಇಲಾಖೆಯು ಫಾರೆನ್ಸಿಕ್ ರಿಪೋರ್ಟ್ ಮತ್ತು ಡೆತ್ ನೋಟ್‌ಗೆ ಸಂಬಂಧಿಸಿದಂತೆ ಹ್ಯಾಂಡ್ರೈಟಿಂಗ್ ಎಕ್ಸ್‌ಪರ್ಟ್ಸ್ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಪ್ರಕರಣದಲ್ಲಿ ತಪ್ಪಿತಸ್ಥರ ಮೇಲೆ ತುರ್ತಾಗಿ ಕ್ರಮ ಜರುಗಿಸುವುದು.

**ದಿನಾಂಕ:08.03.2021ರಂದು ಅಧ್ಯಕ್ಷತೆಯಲ್ಲಿ ಬೆಳ್ತಂಗಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕುಂದುಕೊರತೆಗಳ ಬಗ್ಗೆ ಸಭೆ.**

**ಸಭಾಧ್ಯಕ್ಷರ ನಿರ್ದೇಶನಗಳು:-**

1. ಬೆಳ್ತಂಗಡಿ ಪಟ್ಟಣ ಪಂಚಾಯಿತಿಯಲ್ಲಿ ಅನುಮೋದನೆಗೊಂಡಿರುವ ಸ್ವಚ್ಛತಾ ಕಾರ್ಮಿಕರ ಹುದ್ದೆಗಳನ್ನು ಖಾಯಂಗೊಳಿಸುವುದು. ವಿಳಂಬಗೊಳಿಸುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದು.
2. ಕನಿಷ್ಠ ವೇತನ ಇಎಸ್‌ಐ, ಪಿಎಫ್ ಮತ್ತು ಇತರೆ ಸೌಲಭ್ಯಗಳು ನೀಡುತ್ತಿರುವ ಬಗ್ಗೆ ಪರಿಶೀಲಿಸುವುದು.
3. ಕಾರ್ಮಿಕರ ಅಳತೆಗೆ ತಕ್ಕಂತೆ ಹಾಗೂ ಉತ್ತಮ ಗುಣಮಟ್ಟದ ಸುರಕ್ಷತಾ ಪರಿಕರಗಳನ್ನು ತೊಟ್ಟು ಕಾರ್ಯನಿರ್ವಹಿಸಲು ಕ್ರಮವಹಿಸುವುದು. ಸುರಕ್ಷತಾ ಪರಿಕರಗಳನ್ನು ತೊಡದೇ ಇರುವುದು ಕಂಡುಬಂದಲ್ಲಿ ಅಂತಹವರ ಮೇಲೆ ಸರ್ಕಾರದ ಆದೇಶದನ್ವಯ ದಂಡವನ್ನು ವಿಧಿಸುವುದು.
4. ಸರ್ಕಾರದ ವಿವಿಧ ಯೋಜನೆಗಳಡಿ ಪ್ರತಿ ಕಾರ್ಮಿಕರಿಗೂ ಕಡ್ಡಾಯವಾಗಿ ಮನೆ ಕಲ್ಪಿಸುವುದು. ಗುರುತಿಸಲ್ಪಟ್ಟಂತಹ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಎಂ.ಎಸ್ ಕಾಯ್ದೆ 2013 ಸೆಕ್ಷನ್-13ರ ಪ್ರಕಾರ ಕಡ್ಡಾಯವಾಗಿ ಪುನರ್ವಸತಿ ಕಲ್ಪಿಸುವುದು.
5. ನುರಿತ ವೈದ್ಯರಿಂದ ಪ್ರತಿ 3 ತಿಂಗಳಿಗೊಮ್ಮೆ ಕಾರ್ಮಿಕರಿಗೆ ಕಡ್ಡಾಯವಾಗಿ ಮಾಸ್ಟರ್ ಆರೋಗ್ಯ ತಪಾಸಣೆಯನ್ನು ಮಾಡಿಸುವುದು.

**ದಿನಾಂಕ:09.03.2021ರಂದು ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಶ್ರೀ. ಶಿವಣ್ಣ ಎಂ.(ಕೋಟೆ), ಮಾನ್ಯ ಅಧ್ಯಕ್ಷರು, ರವರ ಅಧ್ಯಕ್ಷತೆಯಲ್ಲಿ ನಡೆದ ಎಂ.ಎಸ್ ಕಾಯ್ದೆ 2013ರ ಕಾಯ್ದೆ ಮತ್ತು ನಿಯಮಗಳ ಪರಿಣಾಮಕಾರಿ ಅನುಷ್ಟಾನ ಮತ್ತು ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಸಭೆ.**

***

**ಸಭಾಧ್ಯಕ್ಷರ ನಿರ್ದೇಶನಗಳು:**

1. ಪೌರಕಾರ್ಮಿಕರ ಕಾಲೋನಿಗಳಿಗೆ ಭೇಟಿ ನೀಡಿ ವಯೋಮಾನದಂತೆ ಸಫಾಯಿ ಕರ್ಮಚಾರಿಗಳ ಮಕ್ಕಳ ಪಟ್ಟಿ ಮಾಡಿ ಉಚಿತ ಶಿಕ್ಷಣಕ್ಕೆ ಪ್ರವೇಶಾತಿ ಕಲ್ಪಿಸುವುದು.
2. ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಸಮಾಜ ಕಲ್ಯಾಣ ಇಲಾಖೆ ಜಂಟಿಯಾಗಿ ಕೌಶಲ್ಯ ತರಬೇತಿಯನ್ನು ಕೌಶಲ್ಯಾಭಿವೃದ್ಧಿ ಇಲಾಖೆ ಸಹಯೋಗದಿಂದ ಆಯೋಜಿಸುವುದು.
3. ಖಾಯಂ ಪೌರಕಾರ್ಮಿಕರ ಗೃಹಭಾಗ್ಯ ಯೋಜನೆಯಡಿಯಲ್ಲಿ ಪೌರಕಾರ್ಮಿಕರಿಗಾಗಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಯಿಂದ ಸೂಕ್ತ ಸ್ಥಳವನ್ನು ಕಾಯ್ದಿರಿಸಿ ವಸತಿ ಭಾಗ್ಯವನ್ನು ಕಲ್ಪಿಸುವುದು.
4. ನೇರ ವೇತನ ಹಾಗೂ ಲೋಡರ್, ಟಿಪ್ಪರ್ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸರ್ಕಾರದ ವಿವಿಧ ಯೋಜನೆಗಳಡಿ ಮನೆಗಳನ್ನು ನಿರ್ಮಾಣ ಮಾಡಿಕೊಡುವುದು.
5. ಕೊಡಗು ಹಾಗೂ ಇತರ ನಗರ ಸ್ಥಳೀಯ ಸಂಸ್ಥೆಗಳ ಕಾರ್ಮಿಕರಿಗೆ 2011ರಿಂದ 2015ರವರೆಗೂ ಬಾಕಿಯಿರುವ ಪಿಎಫ್ ಮೊತ್ತವನ್ನು ಕಾರ್ಮಿಕರ ಖಾತೆಗೆ ಜಮೆ ಮಾಡುವುದು.
6. ಕಡ್ಡಾಯವಾಗಿ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್‌ಚೆಕಪ್ ಮಾಡಿಸುವುದು ಹಾಗೂ ಮಾರಣಾಂತಿಕ ಖಾಯಿಲೆಗಳು ಕಂಡುಬಂದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಶೇ.24.10ರಲ್ಲಿ ಸೂಕ್ತ ಚಿಕಿತ್ಸೆಯನ್ನು ನೀಡುವುದು.
7. ನಿಗಮದ ಅಧಿಕಾರಿಗಳು ಕಡ್ಡಾಯವಾಗಿ ಪೌರಕಾರ್ಮಿಕರ ಕಾಲೋನಿಗೆ ಭೇಟಿ ನೀಡಿ ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು.
8. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಅವಲಂಬಿತರಿಗೆ ಅರ್ಜಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಪೌರಕಾರ್ಮಿಕರೆಂದು ದೃಢೀಕರಿಸುವುದು.
9. ಬಸ್ ನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರಿಗೆ ಕೂಡಲೇ ಕನಿಷ್ಟ ವೇತನ ಹಾಗೂ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಕ್ರಮವಹಿಸುವುದು.



ಆಯೋಗದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕ್ಷಣ, (ಸಚಿವ ಸಂಪುಟ ದರ್ಜೆ ಸಚಿವ ಸ್ಥಾನಮಾನ) ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಹಾಗೂ ಮಾಜಿ ಸಚಿವರು, ಕರ್ನಾಟಕ ಸರ್ಕಾರ. ದಿನಾಂಕ:01.12.2020ರಂದು ಆಯೋಗದಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ



ಜಿಲ್ಲಾ ಜಾಗೃತಿ ಸಮಿತಿ ಸದಸ್ಯರಿಗೆ ಹಾಗೂ ಪೌರಕಾರ್ಮಿಕರ ಮುಖಂಡರಿಗೆ ಮಾನ್ಯ ಶ್ರೀ.ಸಂತೋಷ್ ಜೀ ರವರ ಅಧ್ಯಕ್ಷತೆಯಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ.



ಎಂ.ಎಸ್ ಕಾಯ್ದೆ ಮತ್ತು ನಿಯಮಗಳು-2013ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ.



ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಪರಿಶೀಲನೆ



ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನಡೆದ ಸ್ಥಳಕ್ಕೆ ಅಧಿಕಾರಿಗಳನ್ನೊಳಗೊಂಡ ಭೇಟಿ ಹಾಗೂ ಪರಿಶೀಲನೆ.



ಚಾಮರಾಜನಗರ ಜಿಲ್ಲೆಯ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನದ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಕುಂದುಕೊರತೆಗಳ ಕುರಿತು ಜಿಲ್ಲಾಧಿಕಾರಿಗಳ ಜೊತೆ ಸಭೆ.



**ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಮ್ಯಾನ್‌ಹೋಲ್‌ನಲ್ಲಿ ಮೃತಪಟ್ಟ ಕುಟುಂಬದವರಿಗೆ ಭೇಟಿ ಮತ್ತು ಸ್ವಾಂತ್ವನಿಸುತ್ತಿರುವುದು**



**ಮಂಡ್ಯ ಜಿಲ್ಲೆ, ಮದ್ದೂರು ತಾಲೂಕಿನಲ್ಲಿ ಮೃತಪಟ್ಟ ಪೌರಕಾರ್ಮಿಕರ ಮನೆಗೆ ಜಿಲ್ಲಾಧಿಕಾರಿಗಳೊಂದಿಗೆ ಭೇಟಿ.**



ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಶುಗರ್ ಫ್ಯಾಕ್ಟರಿಯಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ.



ಆಧುನಿಕ ಯಂತ್ರಗಳಾದ ಸಕ್ಕಿಂಗ್, ಜಟ್ಟಿಂಗ್ ಯಂತ್ರಗಳ ಬಗ್ಗೆ ಪರಿಶೀಲನೆ.




**ರಾಯಚೂರು ಜಿಲ್ಲಾಧಿಕಾರಿಗಳ ಕಛೇರಿಯ ಜಿಲ್ಲಾ ವ್ಯಾಪ್ತಿಯಲ್ಲಿ ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ಬಗ್ಗೆ ಪರಿಶೀಲನಾ ಸಭೆ.**



**ಬೆಂಗಳೂರು ವಿವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರೊಂದಿಗೆ ಚರ್ಚೆ**